ಉದ್ಯಮಗಳ, ಸಹಕಾರಿ ಸಂಸ್ಥೆಗಳ ಮತ್ತು ಶಾಸನಬದ್ಧ ನಿಕಾಯಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಈ ಸಮಿತಿಗಳ ಸಭೆಗಳಿಗೆ ಹಾಜರಾಗಬೇಕು.

ಆ) ಇಲಾಖೆಗಳು ಸಂಸ್ಥೆಗಳು ಮತ್ತು ಜಿಲ್ಲಾ ಪಂಚಾಯತ್‌ಗಳು ಹಾಜರಾಗದಿದ್ದವರ ಮೇಲೆ ವರ್ಗೀಕರಣ ನಿಯಂತ್ರಣ ಹಾಗೂ ಮೇಲ್ಮನವಿಗಳ ನಿಯಮಾನುಸಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ : ಹೆಲ್ತ್ ಕ್ಲಬ್ ಪ್ರಾರಂಭೋತ್ಸವ.

ಅಧ್ಯಕ್ಷರು : ಸನ್ಮಾನ್ಯ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕಾನೆಸ್ಟಿಟ್ಯೂಯಂಟ ಅಪ್ಲೆಂಜಿನಲ್ಲಿ ಸದಸ್ಯರಾಗಿದ್ದ ಶ್ರೀ ಎಂ. ಎನ. ಶ್ರೀನಿವಾಸರವರಿಗೆ ಸನ್ಮಾನ ಮಾಡುವ ಜವಾಬ್ದಾರಿ ನನ್ನ ಮೇಲೆ ಇದೆ. ಅವರಿಗೆ ವಯಸ್ಸು ಹೆಚ್ಚಾಗಿದೆ. ಡೆಲ್ಲಿಗೆ ಹೋಗಲು ಆಗುವುದಿಲ್ಲ, ಅದು ಭಾರತ ಸರ್ಕಾರದವರು ಹಮ್ಮಿಕೊಂಡ ಕಾರ್ಯಕ್ರಮ, ಲೋಕಸಭಾಧ್ಯಕ್ಷರ ಪರವಾಗಿ ನಾನು ಆ ಕಾರ್ಯಕ್ರಮಕ್ಕೆ ಹೋಗುತ್ತೇನೆ, ಉಪಾಧ್ಯಕ್ಷರು ಇಲ್ಲಿ ಇರುತ್ತಾರೆ. ನಮ್ಮ ಶಾಸಕರ ಸಲುವಾಗಿ ಶಾಸಕರಭವನದಲ್ಲಿ ಹೆಲ್ತ್ ಕ್ಲಬ್‌ಅಂತ ಏನು ಮಾಡಿದ್ದೇವೆ ಅದರ ಪ್ರಾರಂಭೋತ್ಸವ ಮಾಡುವುದಕ್ಕೆ ನಾಳೆ ಬೆಳಿಗ್ಗೆ 9-30ಕ್ಕೆ ಮಾನ್ಯ ರಾಜ್ಯಪಾಲರು, ಅಲ್ಲಿಗೆ ಬರುತ್ತಾರೆ, ಮಾನ್ಯ ಸದಸ್ಯರು ಎಲ್ಲಾರೂ ಕೂಡ ದಯಮಾಡಿ ಸಹಕರಿಸಬೇಕು, ಆಡಳಿತ ಪಕ್ಷದವರು, ವಿರೋಧ ಪಕ್ಷದವರು, ಮಾನ್ಯ ಮಂತ್ರಿಗಳು, ವಿರೋಧ ಪಕ್ಷದ ಮುಖಂಡರುಗಳು ದಯಮಾಡಿ, ಖುದ್ದಾಗಿ ಹಾಜರಾಗಿರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಹೆಲ್ತ್ ಕ್ಲಬ್ ಮಾಡಿರತಕ್ಕಂಥದ್ದರಲ್ಲಿ ಯೋಗ ತರಗತಿಗಳು, ಹಾಗೂ ಉಳಿದ ಎಲ್ಲಾ ವ್ಯಾಯಮ ಮಾಡಲಿಕ್ಕೆ ಕೂಡ ಅನುಕೂಲಮಾಡಿಕೊಟ್ಟಿದ್ದೇವೆ. ಬಹಳ ಚೆನ್ನಾಗಿ ಮಾಡಿದ್ದೇವೆ. ದಯಮಾಡಿ ತಾವು ಎಲ್ಲರೂ ಬಂದು ಸಹಕರಿಸಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸದಸ್ಯ : ತುಂಬಾ ಧನ್ಯವಾದಗಳು.

ಶ್ರೀ ಬಿ. ಎಸ್. ಯಡಿಯೂರಪ್ಪ : ಬಿಸಿನೆಸ್ ಅಡ್ವಸರಿ ಕಮಿಟಿ ಏನಿದೆ ಅಲ್ಲಿ ತಮ್ಮ ಜೊತೆಗೆ ಮತ್ತು ಸರ್ಕಾರದ ಜೊತೆಗೆ ಚರ್ಚೆ ಮಾಡಿ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇವತ್ತು ಯಾವುದೇ ಬಿಲ್ ಇಂಟ್ರಡ್ಯೂಸ್ ಮಾಡಬಾರದು. ಬಿಲ್ ಆಗಬೇಕಾಗಿದೆ ಎಂದು ಆದರೆ ಇಲ್ಲಿ ಏನಾಗಿದೆ ನೋಡಿ. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮಗಳ ಒಂದು ವಿಧೇಯಕವನ್ನು ಮಂಡಿಸುವುದು, ಮತ್ತು ಅಂಗೀಕರಿಸುವುದು, ಸ್ವಾಮಿ ಈ ಬಿಸಿನೆಸ್‌ಅಡ್ವಸರಿ

ಕಮೀಟಿಗೆ ಪಾವಿತ್ರ್ಯತೆ ಇಲ್ಲವೆ? ಅಲ್ಲಿ ಏನು ತೀರ್ಮಾನವಾಗಿದೆ ಅದರಂತೆ ಇವತ್ತು ನಡೆದುಕೊಳ್ಳಬೇಕು. ಅದನ್ನು ಬಿಟ್ಟು ಬೇರೆ ವಿಚಾರಕ್ಕೆ ತಾವು ಅವಕಾಶ ಮಾಡಿಕೊಡಬಾರದು.

ಅಧ್ಯಕ್ಷರು : ಸನ್ಮಾನ್ಯ ಉಪಾಧ್ಯಕ್ಷರು ಕೂಡ ಬಿಸಿನೆಸ ಅಡ್ವಸರಿ ಕಮೀಟಿಯಲ್ಲಿ ಇದ್ದರು, ನಾನೂ ಕೂಡ ಅಲ್ಲಿದು ಆಲೋಚನೆ ಮಾಡಿದ್ದೇವೆ. ಮೊದಲಿನ ಪರಿಸ್ಥಿತಿ ಈಗ ಇಲ್ಲ. ಈಗ ಬದಲಾಯಿಸಿದೆ. ಅವನ್ನು ಕೂಡ ನಾನು ನನ್ನ ಜೊತೆಯಲ್ಲಿ ಇಟ್ಟುಕೊಳ್ಳುತ್ತೇನೆ. ಅವರು ಇರುತ್ತಾರೆ, ಮಾನ್ಯ ಸಚಿವರು ಇರುತ್ತಾರೆ ಎಲ್ಲರೂ ಇರುತ್ತಾರೆ. ಮಾನ್ಯ ಉಪಾಧ್ಯಕ್ಷರು ಇಲ್ಲಿ ಕುಳಿತಿರುತ್ತಾರೆ, ಅವರು ಅಲೋಚನೆ ಮಾಡಿ ತಮ್ಮ ಅಭಿಪ್ರಾಯ ಕೊಡುತ್ತಾರೆ, ನಾನು ಕೊಟ್ಟರೂ ಅವರು ಕೊಟ್ಟರೂ ನಮ್ಮಿಬ್ಬರದ್ದು ಒಂದೇ ಅಭಿಪ್ರಾಯ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸಲಹಾ ಸಮಿತಿಯಲ್ಲಿ ಏನು ತೀರ್ಮಾನವಾಗಿದೆ ಅದರಂತೆ ನಡೆಯಬೇಕು, ಇವತ್ತು ಈ ಸರ್ಕಾರ ಬಿಲ್ ಇಂಟ್ರಡ್ಯೂಸ್ ಮಾಡುವುದಾದರೆ ಬಿಸಿನೆಸ್ ಅಡ್ವೈಸರಿ ಕಮೀಟಿಗೆ ಎನೂ ಪಾವಿತ್ರ್ಯತೆ ಇಲ್ಲವೆ?

(ಮಾನ್ಯ ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಬಿ. ಮಾಮನಿ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅಧ್ಯಕ್ಷರು ಇದ್ದಾಗ ಕೂಡ ಇದೇ ಪ್ರಶ್ನೆ ಮಾಡುತ್ತಿದ್ದೆ. ಬಿಸಿನೆಸ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾದಂತೆ ದಯಮಾಡಿ ತಾವು ಯಾವುದೇ ಬಿಲ್ಲನ್ನು ಇಂಟ್ರಡ್ಯೂಸ ಮಾಡುವುದಕ್ಕೆ ಅವಕಾಶ ಕೊಡಬಾರದು. ಆಯವ್ಯಯದ ಬಗ್ಗೆ ಸಾಕಷ್ಟು ಚರ್ಚೆ ಮಾಡಿ ಅದನ್ನು ನಾವು ಇಲ್ಲಿ ಪಾಸ ಮಾಡಿ ಕೊಡಬೇಕಾಗಿದೆ. ಇವತ್ತು ಇದ್ದಕ್ಕಿದ್ದ ಹಾಗೆ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮ ವಿಧೇಯಕ 1997 ಅದನ್ನು ಇಂಟ್ರಡ್ಯೂಸ ಮಾಡಿ ಅಂಗೀಕಾರ ಮಾಡುವುದಕ್ಕೆ ಇಟ್ಟಿದ್ದೀರಿ. ತಾವು ದಯಮಾಡಿ ಅದಕ್ಕೆ ಅವಕಾಶ ಮಾಡಿಕೂಡದೆ ಆಯವ್ಯಯದ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಉಪಾಧ್ಯಕ್ಷರು ಬಿಸಿನೆಸ ಅಡ್ವೈಸರಿ ಕಮಿಟಿಯಲ್ಲಿ ಸಿರಿಕಲ್ಚರ ಬಿಲ ತೆಗೆದುಕೊಳ್ಳಬೇಕೆಂದು ಅವತ್ತು ನಿರ್ಧಾರವಾಗಿತ್ತು.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಾ ಸಾರಿ, ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತು ಈ ಮಾತನ್ನು ಹೇಳುತ್ತಾ ಇದ್ದೇನೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದರು.

ಉಪಾಧ್ಯಕ್ಷರು : ಅಲ್ಲ ಅದು ಒಂದು ಸುಗ್ರೀವಾಜ್ಞೆ ರಿಪ್ಲೇಸಮೆಂಟ್ ಇದೆ. ಅದನ್ನು ತೆಗೆದುಕೊಳ್ಳಬೇಕು ಎಂದು ಒಪ್ಪಿಕೊಂಡಿದ್ದರು. ನೀವು ಎಲ್ಲರೂ ಕೂಡ ಒಪ್ಪಿಕೊಂಡಿದ್ದೀರಿ.

ನೀವು ನಾವು ಎಲ್ಲರೂ ಕೂಡ ಇಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಇರುವುದರಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದೇ ಒಂದು ಒಪ್ಪಿಕೊಂಡಿದ್ದೇವೆ.

ಉಪಾಧ್ಯಕ್ಷರು : ಅದನ್ನೇ ನಾನು ಹೇಳುವುದು.

ಶ್ರೀ ವಾಟಾಳ್ ನಾಗರಾಜ : ಅದು ಒಂದು ಯಾವುದು?

ಉಪಾಧ್ಯಕ್ಷರು : ಅದು ಸಿರಿಕಲ್ಚರ ಬಿಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರು ಹೇಳಿದರು, ಅದರ ಬಗ್ಗೆ

ಉಪಾಧ್ಯಕ್ಷರು : ಅವರು ಹೇಳಿದ್ದನ್ನು ನಾವು ಹೇಳಬೇಕಾಗುತ್ತದೆ. ಅಲ್ಲಿ ಯಾವುದೂ ಇಲ್ಲವೆಂದು ಆದಮೇಲೆ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ತೆಗೆದುಕೊಳ್ಳುವುದೋ, ಬಿಡುವುದೋ, ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರು ಹೇಳಿದ್ದು ಇಂಟ್ರಡ್ಯೂಸ ಮಾಡಿ ಅದನ್ನು ಪರಿಶೀಲನೆಗೆ ತೆಗೆದುಕೊಳ್ಳುವ ಸಂದರ್ಭದಲ್ಲಿ ನಾನು ನಿಮ್ಮನ್ನು ಕರೆದು ಮಾತುಕತೆ ಅಡಿ ಸರ್ಕಾರಕ್ಕೆ ಮನವರಿಕೆ ಮಾಡುತ್ತೇನೆಂದು.

ಶ್ರೀ ಎಂ. ಪಿ. ಪ್ರಕಾಶ ಸುಗ್ರೀವಾಜ್ಞೆ ರೂಪದಲ್ಲಿ ಬಂದಿದೆ, 27ನೇ ತಾರೀಖು ಅದನ್ನು ಪಾಸ ಮಾಡದೇ ಹೋದರೆ ಲ್ಯಾಪ್ಸ ಆಗುತ್ತದೆ. ಎನ್ನುವ ಕಾರಣದಿಂದ ಈ ಒಂದು ಮಸೂದೆಯನ್ನು ಮಾತ್ರ ಪ್ರಸ್ತಾಪಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದರು. ಈ ಒಂದು ಮಸೂದೆಯ ಚರ್ಚೆಗೆ ತಾವು ಎಲ್ಲರೂ ದಯಮಾಡಿ ಅವಕಾಶವನ್ನು ಮಾಡಿಕೊಡಬೇಕು.

4) ವರದಿಯನ್ನೊಪ್ಪಿಸುವುದು:

ಶ್ರೀ ಜಿ. ಬಿ. ಶಿವಕುಮಾರ : ಮಾನ್ಯ ಉಪಾಧ್ಯಕ್ಷರೆ, ನಾನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟ ಎರಡನೆಯ ವರದಿಯನ್ನು ಹಾಗೂ ಜನಾರೋಗ್ಯ ಶಿಲ್ಪ ಕಾರ್ಯವಲಯಕ್ಕೆ (ಪಿ.ಹೆಚ್.ಇ.) ಸಂಬಂಧಿಸಿದ ಮೂರನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀಮತಿ ಜಿ. ಟಿ. ಲಲಿತಾ ನಾಯಕ : ಮಾನ್ಯ ಉಪಾಧ್ಯಕ್ಷರೆ, ನಾನು ದೇವದಾಸಿ ಪದ್ಧತಿಯ ನಿರ್ಮಾಲನಕ್ಕಾಗಿ ಹಮ್ಮಿಕೊಂಡಿರುವ ಸರ್ಕಾರಿ ಕಾರ್ಯಕ್ರಮಗಳ ಅಧ್ಯಯನದ ಬಗ್ಗೆ ಹತ್ತನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.